<u>ದಿನಾಂಕ **14-08-2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>
<u>ಪಾಟಿ ಸವಾಲು ಃ ಪ್ರತಿವಾದಿ ಪರ ವಕೀಲರಿಂದ</u>

ದಾವಾ ಆಸ್ತಿಗಳ ಸರ್ವೆ ನಂಬರ್ ಮತ್ತು ಚೆಕ್ಕುಬಂದಿಗಳು ಗೊತ್ತಿಲ್ಲ. ಕೆಲವು ಸರ್ವೆ ನಂಬರ್ ಗಳು ಗೊತ್ತಿದೆ. ಅವುಗಳು ಈಗ ನನಗೆ ಗೊತ್ತಿಲ್ಲ. 20 ಆಸ್ತಿಗಳ ಮೇಲೆ ದಾವೆ ಸಲ್ಲಿಸಿರುತ್ತೇನೆ. ನಾನು ಸಲ್ಲಿಸಿರುವ ದಾಖಲಾತಿಗಳು ನನ್ನ ಬಾವ ಅಶೋಕ ಬಿನ್ ಗಿಡ್ಡೇಗೌಡ ನನಗೆ ಕೊಟ್ಟಿರುತ್ತಾರೆ. ಅಶೋಕ 3 ನೇ ಪ್ರತಿವಾದಿಯ ಗಂಡ ಎಂದರೆ ಸರಿ. ಮೂರನೇ ಪ್ರತಿವಾದಿ ಈ ದಾವೆಯಲ್ಲಿ ವಕೀಲರನ್ನು ನೇಮಿಸಿಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವೆಯನ್ನು ನಾನು ಮತ್ತು ಮೂರನೇ ಪ್ರತಿವಾದಿ ಸೇರಿ ಸಲ್ಲಿಸಿದ್ದೇವೆ. ನನ್ನ ಮೊದಲನೇ ಅಕ್ಕ ಮಂಗಳಮ್ಮ 15 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನನ್ನ ಅಕ್ಕನ ಮದುವೆಯನ್ನು ಅದ್ದೂರಿಯಾಗಿ ದಾಸಾಪುರಕ್ಕೆ ಮದುವೆ ಮಾಡಿದ್ದರು ಎಂದರೆ ಸಾಮಾನ್ಯವಾಗಿ ಮದುವೆ ಮಾಡಿರುತ್ತಾರೆ. ನನ್ನ ಅಕ್ಕ ಮದುವೆಯಾದಾಗ ನನಗೆ 6-7 ವರ್ಷ. ನನಗೆ ಈಗ 48 ವರ್ಷ. ನನ್ನ ಅಕ್ಕನ ಮಕ್ಕಳನ್ನು ಈ ದಾವೆಯಲ್ಲಿ ಮೊದಲು ಪಕ್ಷ ಗಾರರನ್ನಾಗಿ ಮಾಡಲು ತೊಂದರೆ ಇತ್ತು ಕಾರಣ ಅವರು ಬರಲಿಲ್ಲವೇನೊ ಎಂದು ತಿಳಿದುಕೊಂಡಿದ್ದೆವು. ನನ್ನ ಅಕ್ಕನನ್ನು ಪಕ್ಷಗಾರರನ್ನಾಗಿ ಮಾಡಿದರೆ ಅವರಿಗೂ ಪಾಲು ಹೋಗುತ್ತದೆ ಉದ್ದೇಶಪೂರ್ವಕವಾಗಿ ಎರಡನೇ ಪ್ರತಿವಾದಿ ಮತ್ತು ನಾನು ಸೇರಿಕೊಂಡು ಸೇರಿಸಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕ ಮತ್ತು ಬಾವ ಒಂದೇ ಊರಿನವರು ಎಂದರೆ ಸರಿ. ನನ್ನ ಅಕ್ಕ ಮತ್ತು ಬಾವ ಮದುವೆಯಾದ ನಂತರ ನನ್ನ ತಂದೆ ಮನೆಯಲ್ಲಿ 10-12 ವರ್ಷಗಳ ಕಾಲ ವಾಸವಾಗಿದ್ದರು. ನನ್ನ ತಂದೆಯೇ ನನ್ನ ಅಕ್ಕನಿಗೆ ಮನೆ ಕಟ್ಟಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂಗಿ 4ನೇ ಪ್ರತಿವಾದಿ ಯಾವಾಗ ಮದುವೆಯಾಗಿರುತ್ತಾರೆ ಗೊತ್ತಿಲ್ಲ. ನನ್ನ ಮದುವೆಯಾದ ನಂತರ 6-7 ವರ್ಷದ ನಂತರ ಮದುವೆಯಾಗಿರುತ್ತಾರೆ. ನನ್ನ ತಂಗಿಯನ್ನು ಮಲ್ಲೇನಹಳ್ಳಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. ನನ್ನ ತಂಗಿ ಮದುವೆಯಾದ ನಂತರ ನನ್ನ ತಮ್ಮ ಮದುವೆಯಾಗುವವರೆಗೆ ನನ್ನ ತಂದೆ ಮನೆಯಲ್ಲಿ ಇದ್ದರು. ನಿಪಿ-12,10,11,18,17 ರ ದಾಖಲೆಗಳು ದಾವಾ ಆಸ್ತಿಗಾಗಲೀ ನಮ್ಮ ಕುಟುಂಬಕ್ಕಾಗಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಆ ದಾಖಲೆಗಳಲ್ಲಿರುವ ಸರ್ವೆ ನಂಬರ್ ಗಳು ದಾವಾದಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಗ ಮತ್ತು ಮೊಮ್ಮಗನಿಗೆ ಮಾಡಿಸಿರುತ್ತಾರೆ. ಆ ವಿಷಯ ನನಗೆ ನನ್ನ ತಂದೆ ಎರಡು ವರ್ಷಗಳ ನಂತರ ತೀರಿಕೊಂಡಾಗ ತಿಳಿಯಿತು.

ಪ್ರಮಾಣಪತ್ರ ಸಲ್ಲಿಸಿದ ದಿನಾಂಕ 07.11.2022 ರಂದು ನನ್ನ ತಂದೆ ಬದುಕಿದ್ದರು ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ನನ್ನ ತಂದೆ ತೀರಿಕೊಂಡಿರುತ್ತಾರೆ ಎಂದು ಪ್ರಮಾಣಪತ್ರದಲ್ಲಿ ಮೂರನೇ ಪ್ರತಿವಾದಿ ಗಂಡ ಹೇಳಿ ಬರೆಸಿರುತ್ತಾರೆ. ನಾನು ಮತ್ತು ಮೂರನೇ ಪ್ರತಿವಾದಿ ಗಂಡ ಪ್ರಮಾಣ ಪತ್ರಕ್ಕೆ ಮಾಹಿತಿ ನೀಡಿರುತ್ತಾರೆ. ನನ್ನನ್ನು ದಸರೀಘಟ್ಟಕ್ಕೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನನಗೆ ಇಬ್ಬರು ಗಂಡು ಮಕ್ಕಳು. ಅದರಲ್ಲಿ ದರ್ಶನ್ ಎಂಬ ಮಗ ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ನನ್ನ ಮಗ ತೀರಿಕೊಳ್ಳುವುದಕ್ಕಿಂತ ಮೊದಲು ನನ್ನ ಮನೆಯಲ್ಲಿ ವಾಸವಾಗಿದ್ದರು. ಸ.ನಂ.70/1ರ ಆಸ್ತಿ ನನ್ನ ತಂದೆಗೆ ವಿಭಾಗದಲ್ಲಿ ಬಂದಿರುತ್ತದೆ. ಸ.ನಂ.70/1ರ ಆಸ್ತಿ ನನ್ನ ತಂದೆ ಕಾಳೇಗೌಡ ಬಿನ್ ನಂಜೇಗೌಡರಿಂದ 10.03.1999 ರಲ್ಲಿ ಕ್ರಯಪತ್ರದಲ್ಲಿ ಖರೀದಿಸಿರತ್ತಾರೆ ಎಂದರೆ ಸರಿಯಲ್ಲ.

ಸ.ನಂ.19/6 ರ ಜಮೀನನ್ನು ನನ್ನ ತಂದೆ ಸಿ ಎಸ್ ಮಂಜೇಗೌಡ ರವರಿಗೆ ಕೊಟ್ಟು ಅದರ ಬದಲಾಗಿ ದಾವಾ ಆಸ್ತಿ 19 ನ್ನು ಅದಲುಬದಲು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ ಅದು ನನ್ನ ತಂದೆಯ ಆಸ್ತಿ. ಸ.ನಂ.19 ನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ ನನ್ನ ಬಾವನನ್ನು ಕೇಳಬೇಕು. ದಾವಾ ಆಸ್ತಿ 4 ಸ.ನಂ.48/5 ರ ಆಸ್ತಿಯನ್ನು ನಾಗಮ್ಮ ಕೋಂ ಬೋಜೇಗೌಡರಿಂದ 09.06.1980 ರಲ್ಲಿ ಕ್ರಯಪತ್ರದ ಮೂಲಕ ನನ್ನ ತಂದೆ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ.

ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

**sd/-**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.